ನಿಮ್ಮ ಅಧಿಕಾರಿಗಳನ್ನು ಕಳುಹಿಸಿ ಮಾಲೂರು ತಾಲ್ಲೂಕು ಒಂದರಲ್ಲಿ ಪರಿಶೀಲನೆ ಮಾಡಿಸಿ, ಆಗ ಅಲ್ಲಿನ ಪರಿಸ್ಥಿತಿ ಹೇಗಿದೆ ಎಂಬುದು ನಿಮಗೆ ಗೊತ್ತಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಶ್ರೀನಿವಾಸಗೌಡರು ಹೇಳಿರತಕ್ಕಂಥರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯನವರ ಪ್ರಶ್ನೆ ಸಣ್ಣ ನೀರಾವರಿ ಇಲಾಖೆಯಿಂದ ಜಲಸಂಪನ್ಮೂಲ ಇಲಾಖೆಗೆ ವರ್ಗಾವಣೆಯಾಗಿದೆ. ಮುಂದಿನ ಪ್ರಶ್ನೆ ಮಾನ್ಯ ಎಂ.ಟಿ.ಬಿ. ನಾಗರಾಜುರವರದು.

666. ಶ್ರೀ ನಾಗರಾಜು ಎಂ.ಟಿ.ಬಿ: ಮಾನ್ಯ ಉಪ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರು ಪೂರ್ವ ತಾಲ್ಲೂಕು ಎಲೆ ಮಲ್ಲಪ್ಪಶೆಟ್ಟಿ ಕೆರೆಯಿಂದ ಹೊಸಕೋಟೆ ದೊಡ್ಡಕೆರೆಗೆ ಏತ ನೀರಾವರಿ ಮೂಲಕ ನೀರನ್ನು ಹರಿಸಲು ಯಾವ ವರ್ಷ ಕಾಮಗಾರಿ ಪ್ರಾರಂಭ ಮಾಡಲಾಗಿದೆ;

(ಆ) ಈ ಕಾಮಗಾರಿಗೆ ನಿಗದಿಪಡಿಸಿದ ಮೊತ್ತವೆಷ್ಟು; ಯಾವ ಲೆಕ್ಕಶೀರ್ಷಿಕೆ ಅಡಿಯಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ;

(ಇ) ಈ ಕಾಮಗಾರಿ ಪೂರ್ಣಗೊಳಿಸಲು ಸರ್ಕಾರವು ಕಾಲ ನಿಗದಿಪಡಿಸಿದೆಯೇ; ನಿಗದಿ ಪಡಿಸಿದಲ್ಲಿ, ಅವಧಿಯೆಷ್ಟು;

(ಈ) ಈ ಕಾಮಗಾರಿಯು ಯಾವ ಹಂತಕ್ಕೆ ಬಂದಿದೆ; ಇದುವರೆವಿಗೂ ವೆಚ್ಚ ಮಾಡಿರುವ ಮೊತ್ತವೆಷ್ಟು;

(ಉ) ನಿಗದಿತ ಅವಧಿಯೊಳಗೆ ಈ ಕಾಮಗಾರಿಯನ್ನು ಪೂರ್ಣಗೊಳಿಸದೇ ಇರಲು ಕಾರಣವೇನು?

ಶ್ರೀ ಬಿ.ಎಸ್ ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು):

(1) ಪ್ರಥಮವಾಗಿ ಕರೆಯಲಾದ ಗುತ್ತಿಗೆಯಂತೆ ಗುತ್ತಿಗೆದಾರರೊಂದಿಗೆ ದಿನಾಂಕ: 22/11/2000ರಂದು ಕರಾರು ಮಾಡಿಕೊಂಡು ದಿನಾಂಕ: 24/11/2000ರಂದು ಕಾರ್ಯಾದೇಶ ನೀಡಲಾಗಿದೆ. ಅದರಂತೆ ಕಾಮಗಾರಿಯನ್ನು 18 ತಿಂಗಳೊಳಗಾಗಿ

ಪೂರ್ಣಗೊಳಿಸಬೇಕಾಗಿತ್ತು. ಭೂಸ್ವಾಧೀನದ ವಿಳಂಬದ ಕಾರಣದಿಂದಾಗಿ ಕಾಮಗಾರಿಯನ್ನು ಮುಂದುವರೆಸಲು ಗುತ್ತಿಗೆದಾರರು ಒಪ್ಪದ್ದಿದ್ದರಿಂದ ದಿನಾಂಕ: 30/07/05 ರಂದು ಗುತ್ತಿಗೆಯನ್ನು ರದ್ದುಪಡಿಸಲಾಗಿದೆ.

(2) ಕಾಮಗಾರಿಗೆ 2ನೇ ಬಾರಿ ದಿನಾಂಕ: 05/06/2006 ರಂದು ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರಿಗೆ ದಿನಾಂಕ: 28/06/06ರಂದು ಕಾರ್ಯಾದೇಶ ನೀಡಿದ್ದು, ಗುತ್ತಿಗೆದಾರರು ಕಾಮಗಾರಿಯನ್ನು ದಿನಾಂಕ: 14/09/06 ರಂದು ಪ್ರಾರಂಭ ಮಾಡಿರುತ್ತಾರೆ.

(ಆ) 249.00 ಲಕ್ಷ ರೂ.ಗಳು

ಲೆಕ್ಕ ಶೀರ್ಷಿಕೆ "4702-00-101-3-01-ಏತ ನೀರಾವರಿ ಯೋಜನೆಗಳು-436-ನಬಾರ್ಡ್ ಕಾಮಗಾರಿಗಳು" ಅಡಿ ಕೈಗೊಳ್ಳಲಾಗಿದೆ.

(ಇ) ಹೌದು

ಗುತ್ತಿಗೆ ಕರಾರಿನಂತೆ ಮಳೆಗಾಲ ಹೊರತುಪಡಿಸಿದಂತೆ 6 ತಿಂಗಳೊಳಗಾಗಿ ಅಂದರೆ ದಿನಾಂಕ: 14/03/07ರೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿತ್ತು.

(ಈ) ಇದುವರೆವಿಗೂ ಭಾಗಶ: ಮಣ್ಣು ಅಗೆತ, ಏರು ಕೊಳವೆಗಾಗಿ 2 ಕಿಮೀ. ಉದ್ದಕ್ಕೆ ಅವಶ್ಯವಿರುವ ಪೈಪ್‌ಗಳ ಸರಬರಾಜು, ಪಂಪ್ ಹೌಸ್‌ಗೆ ಅಡಿಪಾಯದ ಕಾಮಗಾರಿ ಕೆಲಸ ಪೂರ್ಣಗೊಂಡಿದೆ. ಜೂನ್ 2007ರವರೆಗೆ ಕಾಮಗಾರಿಗೆ ಮಾಡಲಾದ ವೆಚ್ಚ ವಿವರ ಕೆಳಕಂಡಂತಿದೆ:

ಕ್ರ. ಸಂ.	ವಿವರ	ಮೊತ್ತ (ಲಕ್ಷ ರೂ.ಗಳಲ್ಲಿ)
1	ಭೂಸ್ವಾಧೀನ ವೆಚ್ಚ	64.59
2	ಸಿವಿಲ್ ಕಾಮಗಾರಿ	45.44
3	ಬೆಸ್ಕಾಂ	2.74
	ಒಟ್ಟು	112.77

(ಉ) ಟೆಂಡರ್ ಆಧಾರದ ಮೇಲೆ ಕಾಮಗಾರಿಯನ್ನು ದಿನಾಂಕ: 14/09/2006 ರಲ್ಲಿ ಗುತ್ತಿಗೆದಾರರಿಗೆ ವಹಿಸಿದ್ದು, ಗುತ್ತಿಗೆದಾರರು ಮೇಲ್ಕಂಡ ಕೆಲಸಗಳನ್ನು ನಿರ್ವಹಿಸಿದ ನಂತರ ಕಾಮಗಾರಿಯನ್ನು ಮುಂದುವರಿಸದೇ ವಿಳಂಬ ಮಾಡಿರುತ್ತಾರೆ. ನೋಟೀಸ್ ಜಾರಿ ಮಾಡಿದ್ದರೂ ಸಹ ಅವರಿಂದ ಯಾವುದೇ ಪ್ರತಿಕ್ರಿಯೆ ಬಾರದೇ ಇದ್ದ ಕಾರಣ, ಗುತ್ತಿಗೆಯನ್ನು ರದ್ದುಪಡಿಸಲು ದಿನಾಂಕ: 12/07/07 ರಂದು ಅನುಮೋದನೆ ನೀಡಲಾಗಿದೆ. ಗುತ್ತಿಗೆ ರದ್ದುಪಡಿಸಿದ ನಂತರ ಬೇರೊಬ್ಬ ಗುತ್ತಿಗೆದಾರರ ಮೂಲಕ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 76 (666) *(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)*

ಶ್ರೀ ಎಂ. ಟಿ. ಬಿ. ನಾಗರಾಜು: ಮಾನ್ಯ ಅಧ್ಯಕ್ಷರೆ, ಹೊಸಕೋಟೆ ದೊಡ್ಡಕೆರೆಗೆ ಏತ ನೀರಾವರಿ ಕಾಮಗಾರಿಗೆ ದಿನಾಂಕ 03–03–1999ರಲ್ಲಿ 160 ಲಕ್ಷ ರೂಪಾಯಿಗೆ ಮಂಜೂರಾತಿಗೆ ಸರ್ಕಾರ ಅನುಮೋದನೆ ಕೊಟ್ಟಿತು. ಈ 7 ವರ್ಷಗಳಲ್ಲಿ 3 ಗುತ್ತಿಗೆದಾರರು ಬದಲಾವಣೆಯಾಗಿದ್ದಾರೆ. ಈಗ ಇದರ ಒಟ್ಟು ಮೊತ್ತ 2.49 ಕೋಟಿ ರೂಪಾಯಿ ಆಗಿದೆ. ಈಗ ನಬಾರ್ಡ್‌ನಿಂದ ಇದಕ್ಕೆ ಹಣ ಬಿಡುಗಡೆಯಾಗಿದೆ. ಸದರಿ ಕಾಮಗಾರಿ ಪ್ರಾರಂಭವಾಗಿ 7 ವರ್ಷಗಳಾಗಿದ್ದು, ಇದುವರೆಗೂ ಕಾಮಗಾರಿ ಪ್ರಾರಂಭ ಹಂತದಲ್ಲಿಯೇ ಉಳಿದುಕೊಂಡಿದೆ. ಇಲ್ಲಿನ ಹೆಚ್ಚುವರಿ ನೀರು ಪ್ರತಿನಿತ್ಯ ತಮಿಳುನಾಡು ರಾಜ್ಯಕ್ಕೆ ಹರಿದು ಹೋಗುತ್ತಿದೆ. ಹೊಸಕೋಟೆ ಕೆರೆ ಸುಮಾರು 900 ಎಕರೆ ಪ್ರದೇಶದಲ್ಲಿದೆ. ಇಡೀ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯೇ ಅತೀ ದೊಡ್ಡ ಕರೆ ಇದಾಗಿದೆ. ಇವತ್ತಿನ ದಿವಸ ಇಲ್ಲಿ ನೀರಿನ ಬವಣೆ ಜಾಸ್ತಿಯಾಗಿದೆ. ಸತತವಾಗಿ ಮೂರು ವರ್ಷಗಳಿಂದ ಬರಗಾಲ ಬಂದಿದೆ. 900 ಎಕರೆಯ ಈ ದೊಡ್ಡ ಕೆರೆಯಿಂದ ಸುಮರು 100 ಹಳ್ಳಿಗಳು ಕುಡಿಯುವ ನೀರಿಗೆ ಅವಲಂಬಿತವಾಗಿವೆ. ಹೆಚ್ಚುವರಿ ನೀರು ಅಲ್ಲಿ ಸ್ಪೋರೇಜ್ ಆದರೆ ಸುಮಾರು 50 ಹಳ್ಳಿಗಳಿಗೆ ಕುಡಿಯುವ ನೀರಿನ ಬವಣೆಯನ್ನು ನೀಗಿಸಬಹುದೆಂದು ಈ ಒಂದು ಕಾಮಗಾರಿಗೆ ಸರ್ಕಾರ ಆದೇಶ ಕೊಟ್ಟಿದೆ. ಆದರೆ 7 ವರ್ಷಗಳಿಂದ ಈ ಕಾಮಗಾರಿ ಪ್ರಾರಂಭದ ಹಂತದಲ್ಲಿಯೇ ಇದೆ. ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಕಳಕಳಿಯಿಂದ ಕೇಳುವುದೇನೆಂದರೆ, ಸದರಿ ಕಾಮಗಾರಿಯನ್ನು ಕೇವಲ 6 ತಿಂಗಳಲ್ಲಿ ಮುಗಿಸುತ್ತೇವೆಂಬ ಉತ್ತರವನ್ನು ಕೊಟ್ಟಿದ್ದೀರಿ. ಆದರೆ, ಇದು ನಮಗೆ ಸಮಾಧಾನ ತರುವಂಥ ಉತ್ತರವಲ್ಲ. ಮಾನ್ಯ ಉಪಮುಖ್ಯಮಂತ್ರಿಗಳು ಇದರ ಬಗ್ಗೆ ಹೆಚ್ಚಿನ ಗಮನ ಹರಿಸಿ ಈ ಕಾಮಗಾರಿಯನ್ನು ಆದಷ್ಟು ಬೇಗನೆ ಮುಗಿಸಿಕೊಡಬೇಕೆಂದು ತಮ್ಮ ಮೂಲಕ ಅವರಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, 1998-99ರಲ್ಲಿ ನಬಾರ್ಡ್‌ನ ಧನಸಹಾಯದಿಂದ ಸದರಿ ಕಾಮಗಾರಿ 160 ಲಕ್ಷ ರೂಪಾಯಿ ಅಂದಾಜು ವೆಚ್ಚದಲ್ಲಿ ಪ್ರಾರಂಭವಾಗಬೇಕಾಗಿತ್ತು. ಆ ಸಮಯದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಸರಿಯಾಗಿ ಆಗಲಿಲ್ಲವೆಂಬ ಕಾರಣದಿಂದ ಸಂಬಂಧಪಟ್ಟಂತಹ ಗುತ್ತಿಗೆದಾರನಿಗೆ ಇಎಂಡಿ ಹಣವನ್ನು ವಾಪಸು ಕೊಟ್ಟು ಆತನನ್ನು ಕೈಬಿಟ್ಟಾಯಿತು. ದಿನಾಂಕ 16-08-2005 ರಲ್ಲಿ 249 ಲಕ್ಷ ರೂಪಾಯಿಗೆ ಆಡಳಿತಾತ್ಮಕ ಅನುಮೋದನೆಯನ್ನು ಕೊಟ್ಟಿದ್ದೇವೆ. ದಿನಾಂಕ 26-9-2006ರಲ್ಲಿ ತಾಂತ್ರಿಕ ಮಂಜೂರಾತಿಯನ್ನು ಸಹ ನೀಡಿದ್ದೇವೆ. ಈ ಕಾಮಗಾರಿ ಪ್ರಾರಂಭವಾಗುವಂತಹ ಕಾಲದಲ್ಲಿ ಯಾವ ಗುತ್ತಿಗೆದಾರನು ಈ ಕೆಲಸವನ್ನು ವಹಿಸಲಾಗಿತ್ತೋ ಆ ಗುತ್ತಿಗೆದಾರನೂ ಕೂಡ ಈಗ ಸದರಿ ಕೆಲಸವನ್ನು ಮಾಡುತ್ತಿಲ್ಲ. ಆದ್ದರಿಂದ, ಇದರ ಬಗ್ಗೆ ನಮ್ಮ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿದ್ದೇನೆ. ಒಂದು ಸಾರಿ ಒಬ್ಬ ಗುತ್ತಿಗೆದಾರ ಕೆಲಸವನ್ನು ಪಡೆದುಕೊಂಡ ಮೇಲೆ ಅರ್ಧಂಬರ್ಧ ಕೆಲಸ ಮಾಡಿ ವಾಪಸ್ಸು ಹೋಗುವಂಥವರ ಮೇಲೆ ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮತ್ತು ಇಡೀ ರಾಜ್ಯದಲ್ಲಿ ಅದು ಯಾವುದೇ ಇಲಾಖೆ ಇರಬಹುದು ಆತ ಕಾಮಗಾರಿಯನ್ನು ಮಾಡಬಾರದು ಮತ್ತೆ ಆತನ ಹೆಸರನ್ನು ಬ್ಲ್ಯಾಕ್‌ಲಿಸ್ಟ್‌ನಲ್ಲಿ ಸೇರಿಸಬೇಕೆಂದು ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ತಕ್ಷಣ ಬೇರೆ ಗುತ್ತಿಗೆದಾರರನ್ನು ವ್ಯವಸ್ಥೆ ಮಾಡಿ ಸದರಿ ಕೆಲಸವನ್ನು ಆದಷ್ಟು ಬೇಗ ಪೂರ್ಣ ಮಾಡುವುದಕ್ಕೆ ನಾನು ತ್ವರಿತಗತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ. ಆದ್ದರಿಂದ, ಇದರ ಬಗ್ಗೆ ಯಾವುದೇ ರೀತಿಯ ಅನುಮಾನ ಬೇಡವೆಂದು ಹೇಳುವುದಕ್ಕೆ ಬಯಸುತ್ತೇನೆ. ಕೆಲಸವನ್ನು ಮಾಡುತ್ತೇವೆಂದು ಹೇಳಿ ಕಾರಣವಿಲ್ಲದೆ ಮಧ್ಯದಲ್ಲಿ ಬಿಟ್ಟು ಹೋಗುವಂಥ ಗುತ್ತಿಗೆದಾರರನ್ನು ಕೇವಲ ಸಣ್ಣ ನೀರಾವರಿ ಇಲಾಖೆಯಲ್ಲದೆ ಬೇರೆ ಬೇರೆ ಇಲಾಖೆಗಳಲ್ಲಿಯೂ ಕಾಣುತ್ತಿದ್ದೇವೆ. ಕೆಲಸವನ್ನು ಪೂರ್ಣವಾಗಿ ಅರ್ಧಂಬರ್ಧ ಬಿಟ್ಟು ಹೋಗತಕ್ಕಂಥವರಿಗೆ ಬಿಲ್ ಕೊಡಬಾರದು. ಅವರು ಮಾಡಿರುವಂಥ ಕಾಮಗಾರಿಗೆ ಅರ್ಧಂಬರ್ಧ ಬಿಲ್ ಕೊಟ್ಟು ಆತನನ್ನು ಕಳುಹಿಸಿ ಇನ್ನೊಬ್ಬ ಗುತ್ತಿಗೆದಾರರನ್ನು ಹುಡುಕುವುದಕ್ಕೋಸ್ಕರ ಕೆಲಸಗಳು ನಿಧಾನವಾಗುತ್ತಿವೆ. ಹಿಂದೆ ಮಾಡಿದಂಥ ಗುತ್ತಿಗೆದಾರನನ್ನು ಹುಡುಕುತ್ತಿದ್ದೇವೆ. ಆತನ ಮೇಲೆ ಕ್ರಮ ಕೈಗೊಂಡು, ಮತ್ತೆ ಅಷ್ಟೇ ಅಂದಾಜಿನಲ್ಲಿ ಇನ್ನೊಬ್ಬ ಗುತ್ತಿಗೆದಾರನಿಗೆ ಕೆಲಸ ಕೊಟ್ಟು ವ್ಯತ್ಯಾಸವನ್ನು ಹಿಂದಿನ ಗುತ್ತಿಗೆದಾರನಿಂದ ವಸೂಲ್ಮಾಡಬೇಕೆಂದು ನಾನು ಸೂಚನೆ ಕೊಟ್ಟಿದ್ದೇನೆ. ಇದರ ಬಗ್ಗೆ ನಾನು ವಿಶೇಷ ಗಮನ ಕೊಟ್ಟು ನಮ್ಮ ಅಧಿಕಾರಿಗಳನ್ನು ಸ್ಪಾಟ್‌ಗೆ ಕಳುಹಿಸಿ ಬೇರೊಂದು ವ್ಯವಸ್ಥೆ ಮಾಡಿ

ಸದರಿ ಕಾಮಗಾರಿ ಪೂರ್ಣಗೊಳಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಎಂ. ಟಿ. ಬಿ. ನಾಗರಾಜು:– ಸಣ್ಣ ನೀರಾವರಿ ಇಲಾಖೆಯಲ್ಲಿರುವ ಅಧಿಕಾರಿಗಳ ನಿರ್ಲಕ್ಷ್ಯತನ ಮತ್ತು ಬೇಜವಾಬ್ದಾರಿಯಿಂದ 7 ವರ್ಷಗಳಾದರು ಸದರಿ ಕೆಲಸ ಮುಗಿಸುವುದಕ್ಕೆ ಆಗಿಲ್ಲವೆಂದು ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತೇನೆ. ಕಳೆದ 2 ತಿಂಗಳಲ್ಲಿ 49 ಲಕ್ಷ ರೂಪಾಯಿಗಳಷ್ಟು ಬಿಲ್ ಪೇಮೆಂಟ್ ಮಾಡಿದ್ದಾರೆ. ಪೈಪ್‌ನ್ನು ರವಾನೆ ಮಾಡಿದಾಗ ಆ ಪೈಪ್‌ಗೆ ಸಂಬಂಧಪಟ್ಟಂತೆ ದಯಮಾಡಿ ಪೇಮೆಂಟ್ ಮಾಡಬೇಡಿ, ಆ ಪೈಪ್‌ನ್ನು ಭೂಮಿಯಲ್ಲಿ ಅಳವಡಿಸಿದ ಮೇಲೆ ಪೇಮೆಂಟ್ ಮಾಡಿ ಎಂದು ನಾನು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೆ. ಆದರೂ ಕೂಡ 49 ಲಕ್ಷ ರೂಪಾಯಿ ಪೇಮೆಂಟ್ ಮಾಡಿದ್ದಾರೆ. 49 ಲಕ್ಷ ರೂಪಾಯಿ ಪೇಮೆಂಟ್ ಕೊಟ್ಟ ಮರುದಿವಸದಿಂದ ಗುತ್ತಿಗೆದಾರ ಕೆಲಸ ಕಡೆಗೆ ತಿರುಗಿ ಕೂಡ ನೋಡಿಲ್ಲ. ಇವತ್ತಿನ ದಿವಸ ಸಾಕಷ್ಟು ಕಾಮಗಾರಿಗಳಲ್ಲಿ ಗುತ್ತಿಗೆದಾರರು ನಿರ್ಲಕ್ಷ್ಯ ಮಾಡಿ ಅರ್ಧಕ್ಕೆ ಬಿಟ್ಟು ಹೋಗಿದ್ದಾರೆ. ಅಂಥ ಗುತ್ತಿಗೆದಾರರುಗಳ ಮೇಲೆ ಸರ್ಕಾರ ಸೂಕ್ತ ಕ್ರಮ ಜರುಗಿಸಬೇಕೆಂದು ತಮ್ಮ ಮೂಲಕ ಮಾನ್ಯ ಉಪ ಮುಖ್ಯಮಂತ್ರಿಯವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ಅಲ್ಲಿನ ಗುತ್ತಿಗೆದಾರನಿಗೆ ಎಷ್ಟು ಕೆಲಸ ಪೇಮೆಂಟ್ ಮಾಡಿದ್ದಾರೆಂದು ಪರಿಶೀಲನೆ ಮಾಡುತ್ತೇನೆ. ಕೆಲಸ ಮಾಡಿರತಕ್ಕಂಥದರಲ್ಲಿ ಸ್ವಲ್ಪ ಭಾಗ ಪೇಮೆಂಟ್ ಮಾಡಿದ್ದರೆ ಪರವಾಗಿಲ್ಲ. ಇಲ್ಲದ್ದಿದ್ದರೆ ಆತನಿಗೆ ಹೆಚ್ಚು ಹಣವನ್ನು ಕೊಟ್ಟು, ಗುತ್ತಿಗೆದಾರ ಕೆಲಸ ಕೈಬಿಟ್ಟು ಹೋಗಿದ್ದಂಥ ಸಂದರ್ಭದಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ. ಪರಿಶೀಲನೆ ಮಾಡುವುದಕ್ಕೋಸ್ಕರ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿಕೊಡುತ್ತೇನೆ. ಶಾಸಕರಾಗಿ ತಾವು ಕೂಡ ಅಲ್ಲಿಗೆ ಹೋಗಿ. ಗುತ್ತಿಗೆಯನ್ನು ಆ ಗುತ್ತಿಗೆದಾರನಿಗೆ ಯಾರು ಕೊಡಿಸಿದರೆಂಬುದು ನನಗೆ ಗೊತ್ತಿಲ್ಲ ಅದರಲ್ಲಿ ಯಾರೂ ಬರುತ್ತಿರಲಿಲ್ಲ, ಎರಡನೇ ಕಂಟ್ರಾಕ್ಟರಿಗೆ ಕೆಲಸವನ್ನು ವಹಿಸಿರುತ್ತೇವೆ. ಅವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ವ್ಯತ್ಯಾಸದ ಮೊತ್ತಕ್ಕೆ ರೀ–ಟೆಂಡರನ್ನು ಕರೆದು ಬೇರೆ ಗುತ್ತಿಗೆದಾರನಿಗೆ ಕೊಡುತ್ತೇವೆ. ಆಗ ವ್ಯತ್ಯಾಸವಾದರೆ ಅವನಿಂದ ಹಣವನ್ನು ವಸೂಲು ಮಾಡುತ್ತೇವೆ. ಆ ಕಂಟ್ರಾಕ್ಟರ್‌ನು ಇಡೀ ರಾಜ್ಯದಲ್ಲಿ ಯಾವ ಇಲಾಖೆಯ ಕೆಲಸವನ್ನು ಮಾಡದಂತೆ ಅವರನ್ನು ಬ್ಲಾಕ್‌ಲಿಸ್ಟ್‌ಗೆ ಸೇರಿಸುವಂಥ ಕೆಲಸವನ್ನು ಮಾಡುತ್ತೇವೆ. ಬ್ಲಾಕ್‌ಲಿಸ್ಟ್‌ಗೆ ಸೇರಿಸುವುದಕ್ಕೆ ಪ್ರಯತ್ನವಲ್ಲ ಈಗಾಗಲೇ ಸೂಚನೆಯನ್ನು ಕೂಡ ಕೊಟ್ಟಿದ್ದೇನೆ. ಬ್ಲಾಕ್‌ಲಿಸ್ಟ್‌ಗೆ ಸೇರಿಸುವುದಕ್ಕೆ

ಈಗ ಅಲ್ಲ, ಯಾವುದೇ ಇಲಾಖೆಯಲ್ಲಿ ಇರಬಹುದು. ಸರ್ಕಾರದ ಜೊತೆಗೆ ಗುತ್ತಿಗೆದಾರರು ಏನು ಚೆಲ್ಲಾಟ ಆಡುತ್ತಿದ್ದರು, ಮಕ್ಕಳ ಆಟ ಆಡುತ್ತಿದ್ದರು ಅದನ್ನು ನಾವು ಸಹಿಸುವುದಿಲ್ಲ.

ಶ್ರೀ ಧರ್ಮಸಿಂಗ್: ಉಪ ಮುಖ್ಯಮಂತ್ರಿಗಳು ಯಾರ್ಯಾರು ಗುತ್ತಿಗೆದಾರರು ಎಲ್ಲೆಲ್ಲಿ ಕೆಲಸವನ್ನು ಮಾಡುತ್ತಿಲ್ಲ ಡಿಸೈಡ್ ಮಾಡಿ ತೆಗದು ಹಾಕುತ್ತೇವೆ ಎನ್ನುವಂಥದ್ದನ್ನು ಹೇಳುತ್ತಿದ್ದಾರೆ. ನಾವು ಬಂದು 17 ತಿಂಗಳಾಯಿತು. ಕರ್ನಾಟಕ ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನಡೆಯುತ್ತಿರುವಂಥ ಕೆಲಸ ಕಾರ್ಯಗಳು ಏನು? ನಮ್ಮ ಅಬ್ಬಲ್‌ಪುರ ತಾಲ್ಲೂಕಿನ ಗಾಣಗಾಪುರಕ್ಕೆ ಹೋಗುವಂಥ ಬ್ರಿಡ್ಜ್ 15 ವರ್ಷದ ಹಿಂದೆ ಪ್ರಾರಂಭವಾಗಿದ್ದು. ತಮ್ಮ ಕಾಲದಲ್ಲಿ ಅಲ್ಲ, ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಪ್ರಾರಂಭವಾಗಿದ್ದು. ಏಕೆ ಈ ಮಾತನ್ನು ನಾನು ಕೇಳುತ್ತಿದೇನೆಂದರೆ, ಪ್ರಸ್ತುತವಾಗಿ ಯಾರು ಈ ಕೆಲಸವನ್ನು ಮಾಡುವುದಕ್ಕೆ ತೆಗೆದುಕೊಂಡಿದ್ದಾರೆ. ನಾವು ಪಕ್ಷಬೇಧವನ್ನು ಮರೆತು ಮಾತನಾಡುತ್ತಿದ್ದೇನೆ. ಮಾನ್ಯ ಖರ್ಗೆಯವರು ಕೂಡ ಕ್ರಮವನ್ನು ತೆಗೆದುಕೊಂಡಿದ್ದಾರೆ. ಇವತ್ತು ಗಾಣಗಾಪುರ ದೇವಸ್ಥಾನಕ್ಕೆ ಸಾಕಷ್ಟು ಜನರು ಹೋಗುತ್ತಾರೆ. ಗಾಣಗಾಪುರದಿಂದ ಜೇವರ್ಗಿಗೆ ನನ್ನ ಮತಕ್ಷೇತ್ರಕ್ಕೆ ಹೋಗುವುದು. It is one of the important bridge. ಇಲ್ಲಿಯವರೆಗೆ ಕೆಲಸವಾಗುತ್ತಿಲ್ಲ. ಮಾನ್ಯ ದರ್ಶನಾಪುರವರು ಸಾಕಷ್ಟು ಕೆಲಸವನ್ನು ಮಾಡಿದ್ದಾರೆ, ಮಾಡಿಲ್ಲವೆಂದು ಅಲ್ಲ. ನೀವು ಏನು ಹೇಳುತ್ತಿದ್ದೀರಿ. ತಾವು ಪ್ರತಿಪಕ್ಷದಲ್ಲಿದ್ದಾಗ ಸಾಕಷ್ಟು ರೈತರ ಬಗ್ಗೆ ಪ್ರತಿಭಟನೆ ಮಾಡಿರುತ್ತೀರಿ. ಈ ಕರ್ನಾಟಕ ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ರೈತರಿಗೆ ಸಹಾಯವಾಗುವಂಥ ರೀತಿಯಲ್ಲಿ ಸಾಕಷ್ಟು ಪ್ರತಿಪಾದನೆ ಮಾಡಿದ್ದೇವೆ. ಇವತ್ತು ತಾವು ಬಂದ ಮೇಲೆ ಎಲ್ಲೆಲ್ಲಿ ಕೆಲಸ ನಡೆಯುತ್ತಿಲ್ಲ. ಆ ಕೆಲಸ ಏಕೆ ನಡೆಯುತ್ತಿಲ್ಲವೆಂದು ಒಂದು state level review meeting ಮಾಡಿ, ಎಲ್ಲೆಲ್ಲಿ ಕೆಲಸ ಸರಿಯಾಗಿ ಆಗುತ್ತಿಲ್ಲ ಅಲ್ಲಿ ಸ್ಥಗಿತ ಮಾಡಿ ಯಾರು ಸರಿಯಾಗಿ ಕೆಲಸ ಮಾಡುತ್ತಾರೆ ಅವರಿಗೆ ಕೊಡಬೇಕು.

ಶ್ರೀ ಕೆ. ಗೋಪಾಲಕೃಷ್ಣ ಬೇಳೂರು (ಸಾಗರ): ಮಾನ್ಯ ಅಧ್ಯಕ್ಷರೆ, ಸಣ್ಣ ನೀರಾವರಿ ಇಲಾಖೆಯಲ್ಲಿ ಹೆಚ್ಚಿಗೆ ಹಣ ಬಂದಿರುತ್ತದೆ, ಆದರೆ ಯಾರು ಅಲ್ಲಿ ಸರಿಯಾಗಿ ಕೆಲಸವನ್ನು ಮಾಡುತ್ತಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳು ಇದ್ದಾರೆ, ಒಳ್ಳೆಯ ಕೆಲಸವನ್ನು ಕೊಡುತ್ತಿದ್ದಾರೆ, ಆದರೆ ಅಲ್ಲಿರುವ ಅಧಿಕಾರಿಗಳಾದ JE, ಮತ್ತು Engineer ಬಗ್ಗೆ ನಾನು complaint ಕೊಟ್ಟರು ಸಹ ಯಾವುದೇ ಸಂಬಂಧಪಟ್ಟ ಅಧಿಕಾರಿಗಳು ಎರಡು ತಿಂಗಳಾದರೂ ಆ complaint ಬಗ್ಗೆ ಏನು ಮಾಡುವುದಿಲ್ಲ. ಕೆಲಸವನ್ನು ಕೂಡ ಸಮರ್ಪಕವಾಗಿ ಮಾಡುತ್ತಿಲ್ಲ,

ಕಳಪೆ ಕಾಮಗಾರಿಯನ್ನು ಮಾಡುತ್ತಾರೆ. ಕೂರ್ಲಿಕೊಪ್ಪ ಡ್ಯಾಂ ಬಗ್ಗೆ ಮಾನ್ಯ ಯಡಿಯೂರಪ್ಪರವರಿಗೂ ಕೊಟ್ಟಿದ್ದೇನೆ. ಅಧಿಕಾರಿಗಳೂ complaint ಕೊಟ್ಟಿದ್ದೇನೆ. ಆದರೆ ಯಾವುದೇ ಒಂದು ಸಮಸ್ಯೆಯನ್ನು ಸಹ ಅಧಿಕಾರಿಗಳು ಬಗೆಹರಿಸುವುದಿಲ್ಲ. ನಿಜವಾಗಲೂ ಹೇಳಬೇಕೆಂದರೆ, ಸಣ್ಣ ನೀರಾವರಿ ಇಲಾಖೆಯಿಂದ ಕೆಲಸವನ್ನು ಮಾಡಿರುವ ಬಗ್ಗೆ ನಮ್ಮ ತಾಲ್ಲೂಕಿನಲ್ಲಿ ಸಂಪೂರ್ಣವಾಗಿ ಕಳಪೆ ಕಾಮಗಾರಿಯಾಗಿದೆ. ಮಾನ್ಯ ಯಡಿಯೂರಪ್ಪನವರು ನಾನು ಬರುತ್ತೇನೆ. ಅದನ್ನು ನೋಡೋಣವೆಂದು ಅವರು ಕೆ.ಡಿ.ಪಿ.ಮೀಟಿಂಗ್‌ನಲ್ಲಿ ಹೇಳಿದ್ದರು. ಪಾಪ ಅವರಿಗೆ ಸಮಯ ಸಿಗಲಿಲ್ಲ. ದಯವಿಟ್ಟು ಆ ಅಧಿಕಾರಿಗಳನ್ನು ಆದಷ್ಟು ಬೇಗ change ಮಾಡಿ ಅಲ್ಲಿಯ ಅಭಿವೃದ್ಧಿಯ ಪರವಾಗಿ ತಾವು ಕೆಲಸವನ್ನು ಮಾಡಿಕೊಡಬೇಕೆಂದು ಹೇಳಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರತಿಪಕ್ಷದ ನಾಯಕರು ಹಾಗೂ ನಮ್ಮ ಸದಸ್ಯರು ಹೇಳುತ್ತಿರುವ ಹಾಗೆ, ಬಹಶಃ ಸಣ್ಣ ನೀರಾವರಿ ಇಲಾಖೆಗೆ 2006–07ನೇ ಸಾಲಿನಲ್ಲಿ 450 ಕೋಟಿ ರೂ.ಗಳಿಗಿಂತ ಹೆಚ್ಚು ಹಣವನ್ನು ಖರ್ಚು ಮಾಡಿದ್ದೇವೆ. ಹೋದ ಮಳೆಗಾಲದಲ್ಲಿ ಕೆರೆಕಟ್ಟೆಗಳ ಹೂಳು ತೆಗೆಯುವಂಥ ಯಾವುದೇ ಕಾಮಗಾರಿಯನ್ನು ಮಾಡಕೂಡದು, ಈ ಹಣ ದುರುಪಯೋಗವಾಗುತ್ತದೆಂದು ಸ್ಥಗಿತಗೊಳಿಸಿರುತ್ತೇವೆ. ಮಳೆಗಾಲ ಮುಗಿದ ಮೇಲೆ ಕಾಮಗಾರಿಯನ್ನು ಮಾಡಿದ್ದೇವೆ. ಅತ್ಯಂತ ಉತ್ತಮವಾದ ಕೆಲಸವನ್ನು ಮಾಡುತ್ತಿದ್ದರೂ ಸಹ ಅಲ್ಲಿ ಇಲ್ಲಿ ಎಲ್ಲಿಯಾದರೂ ದೂರುಗಳು ಬಂದಿದ್ದರೆ, ಅದನ್ನು ಮೊದಲನೆಯದಾಗಿ ಪರಿಶೀಲನೆಯನ್ನು ಮಾಡುತ್ತೇನೆ. ಎರಡನೆಯದಾಗಿ 3–4 ವರ್ಷದ್ದು ಸೇರಿ 160 ಕೋಟಿ ರೂ.ಗಳನ್ನು ಖರ್ಚು ಮಾಡಿರಲಿಲ್ಲ. ನಾವು ಈಗ 450 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ. ತಾವೆಲ್ಲ ಸಹಕಾರವನ್ನು ಕೊಟ್ಟರೆ, ಬೇರೆ ಎಲ್ಲಿ ಹಣವನ್ನು ಉಳಿಸಬೇಕು ಉಳಿಸಿ Major Irrigation ಗಿಂತ ಹೆಚ್ಚು ಗಮನವನ್ನು ಸಣ್ಣ ನೀರಾವರಿ ಇಲಾಖೆಗೆ ಕೊಡಬೇಕಾಗಿದೆ. ಅಂತರ್ಜಲ ಕುಸಿಯುವುದನ್ನು ತಪ್ಪಿಸಬೇಕೆಂದರೆ, ಕೆರೆಕಟ್ಟೆಗಳ ಹೂಳನ್ನು ತೆಗೆಯುವಂಥ ಆ ಕೆಲಸವನ್ನು ಮಾಡಬೇಕು. ಯಾವ ಅಧಿಕಾರಿಗಳು ನಿರ್ಲಕ್ಷ್ಯವನ್ನು ಮಾಡುತ್ತಾರೆ, ಯಾವುದೇ ಮುಲಾಜಿಲ್ಲದೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ತಾವು ಏನು ಸಾಗರ ತಾಲ್ಲೂಕಿನ ಬಗ್ಗೆ ಹೇಳಿರುತ್ತೀರಿ, ನಾನು ಈಗಲೇ ಅಧಿಕಾರಿಗಳನ್ನು

ಕಳುಹಿಸಕೊಡುತ್ತೇನೆ, ನಾನು ಕೂಡ ಬರುತ್ತೇನೆ, ಅದನ್ನು ಪರಿಶೀಲನೆ ಮಾಡೋಣ, ಯಾವುದೇ ಮುಲಾಜಿಲ್ಲದೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ.

ಶ್ರೀ ಧರ್ಮಸಿಂಗ್: ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ: ಖಂಡಿತವಾಗಿ ತೆಗೆದುಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ದಿನಾಂಕ 16-07-2007 ರಂದು 6ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 97 ಪ್ರಶ್ನೆಗಳ ಪೈಕಿ 83 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಎಲ್ಲಾ ಕಡೆ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಪಕ್ಷಬೇಧವನ್ನು ಮರೆತು ಬೀಗವನ್ನು ಹಾಕಿ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ. ಇದೆ ಸದನದಲ್ಲಿ ಶಾಸಕರಿಗೆ ಗ್ರಾಮ ಪಂಚಾಯತಿಯ ಹಕ್ಕು ಕೊಡತಕ್ಕಂಥದ್ದು ಆಗಬಾರದು. ಹೆಚ್ಚಿನ ಅಧಿಕಾರ ಗ್ರಾಮ ಪಂಚಾಯತಿಗೆ ಕೊಡಬೇಕೆಂದು ಪಾಸ್ ಆಗಿರುತ್ತದೆ. ಆಗಿನ ಕಾಲದಲ್ಲಿ ನಾವು ಆಗಲಿ ಮಾನ್ಯ ಖರ್ಗೆಯವರು ಆಗಲಿ ಇದೆಲ್ಲವನ್ನು ವಿರೋಧ ಮಾಡಿದ್ದೆವು. ರಾಜೀವ್‌ಗಾಂಧಿಯವರು ಈ ದೇಶದ ಪ್ರಧಾನ ಮಂತ್ರಿಯಾದಾಗ ಕ್ರಾಂತಿಕಾರಕವಾದ ಬದಲಾವಣೆಯನ್ನು ಈ ದೇಶದಲ್ಲಿ ತಂದಿದ್ದಾರೆ. ಅಧಿಕಾರ ವಿಕೇಂದ್ರೀಕರಣ ಗ್ರಾಮ ಪಂಚಾಯತಿಯವರಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕು. ಕರ್ನಾಟಕದಲ್ಲಿಯೂ ಕೂಡ ಗ್ರಾಮ ಪಂಚಾಯತಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದಾರೆ. ನಾನು ಮುಖ್ಯಮಂತ್ರಿಯದಾಗ ಬಳಿಗಾರ್‌ರವರು ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ಮಾನ್ಯ ಮಣಿಶಂಕರ ಅಯ್ಯರ್ ರವರು ಕೂಡ ಕರ್ನಾಟಕ ರಾಜ್ಯದಲ್ಲಿ ಈ ಒಂದು ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯಿತಿ ವ್ಯವಸ್ಥೆ ಚೆನ್ನಾಗಿ ನಡೆಯುತ್ತಿದೆ. ಈ ಕರ್ನಾಟಕ ಇಡೀ ದೇಶದಲ್ಲಿ ಮುಂಚೂಣಿಯಲ್ಲಿದೆ ಎಂದು ಅವರು ಶ್ಲಾಘನೆ ಮಾಡಿರುತ್ತಾರೆ. ನಾವು ಹೋದ ನಂತರ ಶ್ರೀಮಾನ್ ಉದಾಸಿಯವರು ಕೂಡ ಕರೆದಂಥ ಸಭೆಗೆ ನಾವು ಹಾಜರಾಗಿದ್ದೆವು, ಎಲ್ಲಾ ಶಾಸಕರಿಗೆ ಇವತ್ತು ಸಾಕಷ್ಟು ಕೆಲಸ ಕಾರ್ಯಗಳು ಇವೆ. ನನ್ನ ಕಾಲದಲ್ಲಿ ಕೂಡ ಅಧಿಕಾರ ಅವರಿಗೆ ಕೊಡಬೇಕು ಎನ್ನುವ ರೀತಿಯಲ್ಲಿ ಪ್ರಸ್ತಾಪವಾಯಿತು. ಇದು ಈಗಾಗಲೇ